ಇಟ್ಟುಕೊಂಡಿರುತ್ತಿದ್ದರು. ಬರಬರುತ್ತಾ ಹಣ ಕರಗಿತು. ಅವರು ತಂದಿದ್ದ ಗೋಣಿಚೀಲದ ವಸ್ತುಗಳೂ ಖಾಲಿಯಾಗತೊಡಗಿದವು.

ಆ ಅಪ್ಪ–ಮಗನ ನಡುವೆ ಇದ್ದ ಅವ್ಯಾಜ ಪ್ರೀತಿಯನ್ನು ನಾನು ಬದುಕಿರುವವರೆಗೆ ಮರೆಯಲಾರೆ. ಅವರಿಬ್ಬರ ನಡುವಿನ ವಾತ್ಸಲ್ಯದ ಚಿತ್ರಗಳು ನನ್ನ ಮನದಲ್ಲಿ ಅಚ್ಚೊತ್ತಿವೆ. ಒಬ್ಬನೇ ಮಗನನ್ನು ಹೇಗಾದರೂ ಉಳಿಸಿಕೊಳ್ಳಬೇಕೆಂದು ಅಪ್ಪ ಪಡುತ್ತಿದ್ದ ಪಡಿಪಾಟಲನ್ನು ನೆನೆಸಿಕೊಂಡರೆ ನನ್ನ ಕಣ್ಣು ಈಗಲೂ ತುಂಬಿಕೊಳ್ಳುತ್ತದೆ. ಮುನಿಯಪ್ಪ ಮಗನ ಔಷಧಕ್ಕೆ ಮಾತ್ರ ಹಣ ಖರ್ಚು ಮಾಡುತ್ತಿದ್ದರೇ ಹೊರತು ಮಿಕ್ಕ ಯಾವುದಕ್ಕೂ ಚಿಕ್ಕಾಸನ್ನೂ ಖರ್ಚು ಮಾಡುತ್ತಿರಲಿಲ್ಲ. ಇದ್ದ ಅಷ್ಟೂ ಹಣ ಮಗನ ಚಿಕಿತ್ಸೆಗಷ್ಟೇ ಉಪಯೋಗವಾಗಬೇಕು ಎಂಬ ಕಾಳಜಿ ಅವರದು.

ಹುಡುಗನ ಕಾಯಿಲೆಯಲ್ಲಿ ಏರಿಳಿತ ಇದ್ದೇಇತ್ತು. ಸ್ಥಿತಿ ಗಂಭೀರವಾದಾಗ ಹಾಸಿಗೆಯ ಪಕ್ಕದಲ್ಲಿ ಅಪ್ಪ ಸ್ತಂಭೀಭೂತರಾಗಿ ನಿಲ್ಲುತ್ತಿದ್ದರು. ಆ ನೋವಿನಲ್ಲೂ ಮಗ ನಗುಮೊಗದಿಂದಲೇ ಅಪ್ಪನಿಗೆ ಧೈರ್ಯ ತುಂಬುತ್ತಿದ್ದ. ಓಡಾಡುವ ಸ್ಥಿತಿಯಲ್ಲಿ ಇರುವಾಗಲೂ ಮಗನನ್ನು ಅಪ್ಪ ಶೌಚಾಲಯಕ್ಕೆ ಕರೆದುಕೊಂಡು ಹೋಗುತ್ತಿದ್ದರು. ಒಮ್ಮೆಯೂ ಮುನಿಯಪ್ಪ ಗೊಣಗಿದ್ದನ್ನಾಗಲೀ ಬೇಸರ ಪಟ್ಟುಕೊಂಡಿದ್ದನ್ನಾಗಲೀ ನಾನು ನೋಡಲಿಲ್ಲ. ಬಂದದ್ದೆಲ್ಲವನ್ನೂ ಒಬ್ಬರೇ ಎದುರಿಸಿದರು.



ಹನುಮಂತಪ್ಪ ಕೊನೆಯುಸಿರೆಳೆದ ಕ್ಷಣಕ್ಕೆ ಸಾಕ್ಷಿಯಾದದ್ದು ನನ್ನ ದುರದೃಷ್ಟ. ತೀವ್ರ ನಿಗಾ ಘಟಕಕ್ಕೆ ಮುನಿಯಪ್ಪನವರನ್ನು ಕರೆದು, ಮಗ ಕೊನೆಯುಸಿರೆಳೆದ ವಿಷಯವನ್ನು ತಿಳಿಸಿದೆವು. ಅವರು ಅಳಲಿಲ್ಲ. ಅತ್ತಿದ್ದರೆ ಚೆನ್ನಾಗಿತ್ತು. ಮಾತೇ ಆಡಲಿಲ್ಲ. ಅಲ್ಲಿದ್ದ, ಅರ್ಧ ಕರಗಿದ್ದ ಗೋಣಿಚೀಲ ಎತ್ತಿಕೊಂಡರು. ಸೊಂಟದ ಪಟ್ಟಿಯಲ್ಲಿ ನೂರರ ಕೆಲವೇ ನೋಟುಗಳಿದ್ದವು. ಮುನಿಯಪ್ಪ ಅಲ್ಲಿಂದ ಕಾಣೆಯಾದರು. ಎರಡು ತಾಸಾದರೂ ಬರಲಿಲ್ಲ. ಆಸ್ಪತ್ರೆಯ ನಿಯಮದ ಪ್ರಕಾರ ಮೂರು ತಾಸಿಗಿಂತ ಹೆಚ್ಚು ಹೊತ್ತು ಶವವನ್ನು ಇಟ್ಟುಕೊಳ್ಳುವಂತಿಲ್ಲ. ಹುಡುಗನ ಶವಕ್ಕೆ ಅನಾಥಶವದ ಪಟ್ಟಿ